Sri D.B.CHANDREGOWDA :- I would only appeal to the Chair. ದಯಮಾಡಿ ಕೇಳಿ, ಈ ರಾಜ್ಯದ ಯೋಜನೆ, ಈ ರಾಜ್ಯದ ಆಸ್ತಿಯನ್ನು ನಿರ್ಮಾಣ ಮಾಡತಕ್ಕ ಅತ್ಯಂತ ಪ್ರಮುಖವಾದ ಅಂಗ. ಈ ಯೋಜನೆಯಲ್ಲಿ ಮುಖ್ಯವಾಗಿ ಹಣ ಖರ್ಚುಮಾಡದೇಹೋದರೆ, ಏನು ಪ್ರಯೋಜನ. ಯೋಜನಾ ಆಯೋಗದವರು ಸರ್ಟಿಫಿಕೇಟ್ ಕೊಟ್ಟರು ಎಂದು ಸಮರ್ಥನೆ ಮಾಡಿಕೊಂಡು ಹೇಳಿದರೆ, ನಾವು ಯಾವರೀತಿ ಕೆಲಸ ಮಾಡುವುದಕ್ಕಾಗುತ್ತದೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ಈ ಸದನದ ಮೂಲಕ ಜನಕ್ಕೆ ಉತ್ತರ ಹೇಳಬೇಕಾಗುತ್ತದೆ. ಉತ್ತರ ಹೇಳತಕ್ಕ ಜವಾಬ್ದಾರಿಯನ್ನು, ಜನ ಈ ಸರ್ಕಾರಕ್ಕೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು :- ಪ್ರಶ್ನೋತ್ತರ ಕಾಲದಲ್ಲಿ ಅರ್ಧ ಗಂಟೆ, ಮುಕ್ಕಾಲು ಗಂಟೆ ಹೊತ್ತು ಪ್ರಶ್ನೆ ಕೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರ ಯೋಜನೆಯಲ್ಲಿ ವಿಫಲವಾಗಿದೆ, ಒಂದು ಕಡೆ ಸರ್ಕಾರದವರು ಯೋಜನೆ ಮಾಡುತ್ತೇವೆಂದು ಹೇಳುತ್ತಾರೆ, ಮತ್ತೊಂದುಕಡೆ ಯೋಜನೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

(ಗೊಂದಲ)

ಉಪಾಧ್ಯಕ್ಷರು :- ಇದರ ಬಗ್ಗೆ ಬೇರೆ ರೂಪದಲ್ಲಿ ಸೂಚನೆಯನ್ನು ಕಳುಹಿಸಿದರೆ, ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

Because others will be deprived of asking their questions. ಈಗ ಅಜಯಕುಮಾರ್ ಸರನಾಯಕ್.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್ :- ಇದು ಬಹಳ ಪ್ರಮುಖವಾದುದು, ದಯವಿಟ್ಟು ಕೇಳಿ.

(ಗೊಂದಲ)

ಉಪಾಧ್ಯಕ್ಷರು:- ಕೊಶ್ಚನ್ ಅವರ್‌ನಲ್ಲಿ I can't allow . . . .

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ :- ರಾಜ್ಯಕ್ಕೆ ಯೋಜನೆ ಮೂಲಕ ಕಾರ್ಯಗತ ಆಗತಕ್ಕಂಥ ಕೆಲಸವನ್ನು ಕಾರ್ಯಗತ ಮಾಡುವುದರಲ್ಲಿ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ ಇದನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

ಉಪಾಧ್ಯಕ್ಷರು :- ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು ಏನೋ ಹೇಳುತ್ತಾರೆ. ಕೇಳಿರಿ.

Dr.JEEVARAJ ALVA :- Will you yield for a minute ?....

Sri. M.VEERAPPA MOILY :- We have yielded enough.

(ಗೊಂದಲ)

ಉಪಾಧ್ಯಕ್ಷರು :- ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಏನೋ ಹೇಳುತ್ತಾರೆ. ಒಂದು ನಿಮಿಷ ಅವರು ಹೇಳಿದಮೇಲೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ :- ಸರಕಾರ ಸಂಪಾರ್ಣವಾಗಿ ವಿಫಲವಾಗಿದೆ. ಇದನ್ನು ನಾವು ವಿರೋಧಿಸುತ್ತೇವೆ. ಯೋಜನೆಯಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ.

(ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ.ಚಂದ್ರೇಗೌಡರ ನೇತೃತ್ವದಲ್ಲಿ ಕೆಲವು ಮಾನ್ಯಸದಸ್ಯರು ಸಭಾತ್ಯಾಗ